ಮೊಮ್ಮಕ್ಕಳನ್ನು ತಬ್ಬಿಕೊಂಡರು. ಹೊರಡುವ ಮುನ್ನ ಶ್ರೀಕಂಠಯ್ಯ ಮನೆಯ ತುಂಬ ಸುತ್ತಾಡಿ ಕಣ್ಣು ತುಂಬಿಕೊಂಡರು. 'ಹುಟ್ಟಿ ಬೆಳೆದ ಮನೆ. ಮತ್ತೆ ತಿರುಗಿ ಬರ್ತೇನೋ, ಅಲ್ಲಿಯೇ ಸಾಯ್ತೇನೋ, ಯಾರಿಗೆ ಗೊತ್ತು?' ಎಂದು ನಿಟ್ಟುಸಿರಿಟ್ಟರು.

ಫ್ಲೈಟು ರಾತ್ರಿ ಒಂದು ಗಂಟೆಗೆ. ಶ್ರೀಕಂಠಯ್ಯನವರಿಗೆ ವಿದೇಶಪ್ರಯಾಣದ ಅನುಭವ ಇದೇ ಮೊದಲು. ವೇಟಿಂಗ್ ರೂಮಿನಲ್ಲಿ ಕಾಯುತ್ತಿರುವಾಗ ಎದೆಯೊಳಗೆ ಒಂದು ಬಗೆಯ ಹಿಂಸೆ. ಯಾಕೆಂದು ಅವರಿಗೆ ಅರ್ಥವಾಗಲಿಲ್ಲ. 'ಹೋಗುವುದು ಮಗನ ಮನೆಗೆ ತಾನೇ?' ಎಂದು ತಮ್ಮಷ್ಟಕ್ಕೆ ತಾವೇ ಸಾಂತ್ವನ ಹೇಳಿಕೊಂಡರು. ರಾತ್ರಿ ಹನ್ನೊಂದಾದರೂ ವೇಟಿಂಗ್ ರೂಮ್ ತುಂಬ ಜನರ ಚಲನವಲನ. ವಿವಿಧ ಜನಾಂಗಗಳ, ವಿವಿಧ ಭಾಷೆ, ಬಣ್ಣ, ವಯೋಮಾನ, ದಿರಿಸಿನ ವೈವಿಧ್ಯಮಯ ಜಗತ್ತು ಅದು. ಜನ ತಮ್ಮತಮ್ಮ ಬ್ಯಾಗ್ ಎಳೆದುಕೊಂಡು ಆಚೆ ಈಚೆ ಓಡಾಡುತ್ತಿದ್ದುದನ್ನು ಶ್ರೀಕಂಠಯ್ಯ ಕುತೂಹಲ ಮತ್ತು ಆತಂಕದಿಂದ ನೋಡುತ್ತಿದ್ದರು. ಮಗ, ಸೊಸೆ ಪ್ರಯಾಣದ ವಿಧಿಗಳನ್ನು ಪೂರೈಸಲೆಂದು ಕೌಂಟರ್ ಕಡೆಗೆ ಹೊರಟರು. ಮೊಮ್ಮಕ್ಕಳು ಕಿಲಕಿಲ ನಗುತ್ತ, ಹರಟುತ್ತ ತಂದೆತಾಯಿಗಳನ್ನು ಹಿಂಬಾಲಿಸಿದರು. ಅದಾಗಲೇ ಹನ್ನೆರಡು ಗಂಟೆ. ಕೌಂಟರ್ ಬಿಟ್ಟು ಹೊರಬಂದ ಸತೀಶ 'ಅಪ್ಪ! ನೀವಿಲ್ಲೇ ಕೂತಿರಿ. ನಮ್ಮ ಲಗೇಜ್‌ನ ಕನ್ವೇಯರ್ ಬೆಲ್ಟ್‌ಗೆ ಕಳುಹಿಸಿ ಮತ್ತೆ ಬರ್ತೀವಿ. ಹೇಗೂ ವಿಮಾನ ಬಿಡೋದಕ್ಕೆ ಇನ್ನೊಂದು ಗಂಟೆ ಸಮಯ ಇದೆ. ನಿಮ್ಮ ಪುಟ್ಟ ಬ್ಯಾಗ್ ನಿಮ್ಮ ಹತ್ರಾನೇ ಇಟ್ಕೊಳಿ' ಎನ್ನುತ್ತ ಎರಡು ಬ್ಯಾಗ್‌ಗಳನ್ನು ಉರುಳಿಸುತ್ತ ಗಡಿಬಿಡಿಯಿಂದ ಒಳಗೆ ನಡೆದ. ಅಲಕಾ ಇನ್ನೆರಡು ಬ್ಯಾಗ್ ಹಿಡಿದು ಅವನ ಹಿಂದೆ ಹೊರಟಳು. ಯಥಾಪ್ರಕಾರ ಮಕ್ಕಳು ಅವರ ಹಿಂದೆ ಓಡಿದರು.

ಇತ್ತ ಶ್ರೀಕಂಠಯ್ಯ ಕೈಗಡಿಯಾರ ನೋಡುತ್ತ, ಪ್ರವೇಶದ್ವಾರದೆಡೆಗೆ ಕಣ್ಣು ಹಾಯಿಸುತ್ತ ಮಗ ಬರುವುದನ್ನೇ ಕಾಯುತ್ತ ಕುಳಿತರು. ಹನ್ನೆರಡು... ಹನ್ನೆರಡುವರೆ... ಹನ್ನೆರಡೂಮುಕ್ಕಾಲು. ಶ್ರೀಕಂಠಯ್ಯನವರ ಆತಂಕ ಹೆಚ್ಚಾಯಿತು. ಒಂದು ಗಂಟೆಗೆ ಇನ್ನು ಕೇವಲ ಹತ್ತು ನಿಮಿಷ! ತಡೆಯಲಾಗದೆ ಮಗನಿಗೆ ಫೋನ್ ಮಾಡಿದರು. ಫೋನ್ ಸ್ವಿಚ್‌ಆಫ್ ಆಗಿದೆ! ಆತಂಕದಿಂದ ಕೌಂಟರ್ ಬಳಿಗೆ ಓಡಿದರು. **Inquiry Counter** ಎದುರು ನಿಂತಾಗ ಉದ್ವೇಗದಿಂದ ತೇಕುತ್ತಿದ್ದರು.

'ಒಂದು ಗಂಟೆಯ ಲಂಡನ್ ಫ್ಲೈಟ್‌ಗೆ ಪ್ಲೇನ್ ಇನ್ನೂ ಬಂದಿಲ್ವಾ, ಸರ್!'

'ಯಾವ ಏರ್‌ವೇಸ್, ಸರ್!'

'ಬ್ರಿಟಿಶ್ ಏರ್‌ವೇಸ್ ಅಂತಿದ್ದ ನನ್ನ ಮಗ.'

'ಅದು ಹೋಗಿ ಅರ್ಧ ಗಂಟೆ ಆಯ್ತಲ್ಲ, ಸರ್!'

ಶ್ರೀಕಂಠಯ್ಯನವರಿಗೆ ಬವಳಿ ಬಂದಂತಾಗಿ ಕೌಂಟರ್ ಎದುರಿಗೆ ಕುಸಿದು ಕುಳಿತರು. ಪಕ್ಕದಲ್ಲಿದ್ದವರು ಗಾಬರಿಗೊಂಡು 'ಏನಾಯ್ತು, ಸರ್!' ಎನ್ನುತ್ತ ಅವರನ್ನೆಬ್ಬಿಸಿ ಕುಡಿಯಲು ನೀರು ಕೊಟ್ಟರು.

'ನಾನು ಮಗನ ಜೊತೆಗೆ ಅಮೆರಿಕಕ್ಕೆ ಹೋಗಬೇಕಿತ್ತು... ಕರ್ಕೊಂಡು ಹೋಗೋದಕ್ಕೆ ಬರ್ತೀನಿ ಅಂತ ಹೇಳಿ ಒಳಗೆ ಹೋದೋನು ಬಂದೇ ಇಲ್ಲ.'

'ಬ್ರಿಟಿಶ್ ಏರ್‌ವೇಸ್ ತಾನೇ? ಕೌಂಟರ್ ಅಲ್ಲಿದೆ, ನೋಡಿ. ಬನ್ನಿ, ಅಲ್ಲಿ ವಿಚಾರಿಸೋಣ' ಎಂದು ಆ ವ್ಯಕ್ತಿ ಅವರನ್ನು ಕರೆದೊಯ್ದರು.

'ಅಲ್ಲ ಸ್ವಾಮಿ! ಫ್ಲೈಟ್ ವಿವರ ಡಿಸ್‌ಪ್ಲೆ ಆಗ್ತಾ ಇತ್ತಲ್ವಾ? ನೀವು ನೋಡ್ತಾ ಇರ್ಲಿಲ್ವಾ?